# ಅರಸೊತ್ತಿಗೆ ಸಿರಿ ಸಂಪದದ ಕ್ರೆಮ್ಲಿನ್

■ ಗೀತಾ ಕುಂದಾಪುರ



ಕೋಟೆಗಳು ದೇಶ–ಪ್ರಾಂತ್ಯವೊಂದರ ಸಂಸ್ಕೃತಿ, ಕಲೆ, ಶ್ರೀಮಂತಿಕೆ, ಧರ್ಮ ಮತ್ತು ಇತಿಹಾಸವನ್ನು ಬಿಂಬಿಸುವ ಕುರುಹುಗಳು. ಇದಕ್ಕೆ ಉದಾಹರಣೆಯಾಗಿ, ರಷ್ಯಾದ ರಾಜಧಾನಿ ಮಾಸ್ಕೋದಲ್ಲಿ 'ಕ್ರೆಮ್ಲಿನ್' ಎಂದೇ ಪ್ರಸಿದ್ಧವಾಗಿರುವ ಕೋಟೆಯನ್ನು ನೋಡಬಹುದು. ಈ ಕ್ರೆಮ್ಲಿನ್‌ನೊಳಗೆ ಏನೆಲ್ಲಾ ಎಂದು ಕೇಳುವುದರ ಬದಲು, ಏನಿಲ್ಲ ಎಂದು ಕೇಳುವುದೇ ಸರಿ. ಅರಮನೆಗಳು, ಮ್ಯೂಸಿಯಂಗಳು, ಸರಕಾರಿ ಕಚೇರಿಗಳು, ಕ್ರೈಸ್ತರ ಪ್ರಾರ್ಥನಾ ಮಂದಿರಗಳು, ಉದ್ಯಾನಗಳು – ಹೀಗೆ ಊರೊಂದರಲ್ಲಿ ಏನೆಲ್ಲ ಇರಬಹುದೋ ಅವೆಲ್ಲ ಕ್ರೆಮ್ಲಿನ್‌ನಲ್ಲಿವೆ.

ಹಲವು ಶತಮಾನಗಳ ಹಿಂದಿನ ಮಾಸ್ಕೋದ ಕೋಟೆ ಎರಡನೆಯ ಮಹಾಯುದ್ಧದ ಸಮಯದಲ್ಲಿ ಶತ್ರುಗಳ ಕಣ್ಣಿಗೆ ಮಣ್ಣೆರಚಿ, ಇನ್ನೂ ಸುರಕ್ಷಿತವಾಗಿದೆ. ಈ ಕ್ರೆಮ್ಲಿನ್ ಮೊದಲು ಕಟ್ಟಿಗೆಯ ಕೋಟೆಯಾಗಿತ್ತು. 14ನೇ ಶತಮಾನದಲ್ಲಿ ಬಿಳಿ ಸುಣ್ಣದ ಕಲ್ಲಿನ ಕೋಟೆಯನ್ನು ಕಟ್ಟಿದರು. 15ನೇ ಶತಮಾನದ ಅಂತ್ಯಕ್ಕೆ ಬರುತ್ತಿದ್ದಂತೆ ಈಗ ನೋಡುತ್ತಿರುವ ಕೆಂಪು ಇಟ್ಟಿಗೆಯ ಕೋಟೆಯಾಯಿತು. ತ್ರಿಕೋನಾಕಾರದ ಈ ದುರ್ಗದ ಪೂರ್ವ ದಿಕ್ಕಿನಲ್ಲಿ ರೆಡ್ ಸ್ಕ್ವೇರ್ ಇದೆ, ಪಶ್ಚಿಮ ಭಾಗದಲ್ಲಿ ಪಾರ್ಕ್ ಇದೆ, ಇನ್ನೊಂದು ಕಡೆ ಮೊಸ್ಕ್ವಾ ಹೆಸರಿನ ನದಿ. ಲೆನಿನ್ ಕಾಲದಲ್ಲಿ ಸೋವಿಯತ್ ಒಕ್ಕೂಟದ ಕೇಂದ್ರ ಕಚೇರಿ ಇಲ್ಲಿತ್ತು. 1991ರಲ್ಲಿ ಒಕ್ಕೂಟ ಪತನವಾದ ನಂತರ ಇದು ರಷ್ಯನ್ ಫೆಡರೇಷನಿನ ಕೇಂದ್ರ ಕಚೇರಿಯಾಯಿತು.

ಇಲ್ಲಿನ ಇನ್ನೊಂದು ವಿಶೇಷವೆಂದರೆ, ಉದ್ಯಾನವನದಲ್ಲಿ ರಷ್ಯಾದ ಗಗನಯಾತ್ರಿ ಯೂರಿ ಗಗಾರಿನ್ ನೆಟ್ಟ ಓಕ್ ಮರವಿದೆ.

ಕೆಥಡ್ರಲ್ ಸ್ಕ್ವೇರ್ ಹೆಸರಿನ ಚೌಕ ಸರಿಯಾಗಿ ಕೋಟೆಯ ಮಧ್ಯಭಾಗದಲ್ಲಿದೆ. ಕೋಟೆಯ ಎಲ್ಲಾ ದಾರಿಗಳೂ ಇಲ್ಲಿ ಸೇರುತ್ತವೆ. ಈ ಚೌಕದ ಸುತ್ತಮುತ್ತ ಕ್ರೈಸ್ತರ ಹಲವು ಪ್ರಾರ್ಥನಾ ಮಂದಿರಗಳು, ಗಂಟೆ ಗೋಪುರಗಳಿವೆ. ಹಿಂದೆ ರಾಜನ ಪಟ್ಟಾಭಿಷೇಕ, ರಾಜ ಪರಿವಾರದವರ ಶವ ಸಂಸ್ಕಾರದ ಮೆರವಣಿಗೆ, ಧಾರ್ಮಿಕ ಮತ್ತು ರಾಜಕೀಯ ಉತ್ಸವಗಳು ಇಲ್ಲಿ ನಡೆಯುತ್ತಿದ್ದವಂತೆ. ಈಗಲೂ ರಷ್ಯಾದ ಅಧ್ಯಕ್ಷರು ಉದ್ಘಾಟನಾ ಸಮಾರಂಭದ ಭಾಷಣವನ್ನು ಇಲ್ಲಿ ಮಾಡುತ್ತಾರೆ. ಪ್ರೇಕ್ಷಕರಿಗೆ ಕುಳಿತುಕೊಳ್ಳಲು ಅಟ್ಟಣಿಗೆಯ ವ್ಯವಸ್ಥೆ ಇದೆ. ಹಲವು ರಾಜ ಮಹಾರಾಜರುಗಳ ಏಳುಬೀಳುಗಳ ಜೊತೆಗೆ ಮಂದಿರ–ಕಟ್ಟಡಗಳ ನಿರ್ಮಾಣ, ವಿನಾಶ ಮತ್ತು ಪುನಃ ನಿರ್ಮಾಣಗಳನ್ನು ಕಂಡ ಚೌಕವಿದು.

ಕೋಟೆಯ ಒಳಗಿನ ಪ್ರಾರ್ಥನಾ ಮಂದಿರಗಳ ಕಟ್ಟಡಗಳಿಗೆ ಬಿಳಿ ಬಣ್ಣವನ್ನು ಬಳಿದಿದ್ದು, ಅವುಗಳ ಮೇಲೆ ಹಳದಿ ಬಣ್ಣದ ಗುಮ್ಮಟಗಳಿವೆ. 5 ಗುಮ್ಮಟಗಳ ಕೆಥಡ್ರಲ್ ಆಫ್ ಡೊರ್ಮಿಷನ್, ಒಂಬತ್ತು ಗುಮ್ಮಟಗಳ ಕೆಥಡ್ರಲ್ ಆಫ್ ಅನ್ಯೂನಿಸಿಯೇಶನ್, ಕೆಥಡ್ರಲ್ ಆಫ್ ಅರ್ಚಾಂಗಲ್, ಚರ್ಚ್ ಆಫ್ ಟ್ವೆಲು ಎಪಸ್ಟೋಲ್ಸ್, ಚರ್ಚ್ ಆಫ್ ಡೆಪೊಸಿಶನ್ ಆಫ್ ರೋಬ್ ಇವೇ ಅಲ್ಲಿನ ಮುಖ್ಯ ಮಂದಿರಗಳು. ಪ್ರಾರ್ಥನಾ ಮಂದಿರಗಳಲ್ಲಿ ಪ್ರತಿದಿನ ಅಲ್ಲದಿದ್ದರೂ ವಿಶೇಷ ದಿನಗಳಲ್ಲಿ 'ಆಚರಣೆ'ಗಳು ನಡೆಯುತ್ತವೆ

'ಇವಾನ್ ದಿ ಗ್ರೇಟ್ ಬೆಲ್ ಟವರ್' ಕೋಟೆಯಲ್ಲಿನ ವಿಶೇಷ ಆಕರ್ಷಣೆಗಳಲ್ಲೊಂದು. ಬಿಳಿ ಬಣ್ಣದ ಗೋಡೆಗಳು, ಗಂಟೆಗಳಿರುವ ಪುಟ್ಟ ಕಿಟಕಿಗಳು, ತುದಿಯಲ್ಲಿ ಹಳದಿ ಬಣ್ಣದ